 © 2013 IJCRT | Volume 1, Issue 1 January 2013 | ISSN: 2320-2882

# S. L. BHAIRAPPANAVARA SADHANE SIDDHI JANAPRIYATHE

DR. CHANDRAVATHI SHETTY
ASSOCIATE PROFESSOR
KANNADA DEPARTMENT
SRI SHARADA COLLEGE, BASRUR – 576211, KUNDAPURA TALUK, UDUPI DISTRICT, KARNATAKA, INDIA.

## I. INTRODUCTION

ಎಸ್ ಎಲ್ ಭೈರಪ್ಪನವರು ಸಾಹಿತ್ಯದ ಗಂಭೀರ ಓದುವರಿಗೂ ಸಾಮಾನ್ಯ ಓದುವರಿಗೂ ಏಕಕಾಲದಲ್ಲಿ ಪ್ರಿಯವಾದ ಬಲ್ಲಂತಹ ಅದ್ಭುತ ಹಾಗೂ ವೈಶಿಷ್ಟ್ಯ ಪೂರ್ಣ ಕಾದಂಬರಿಗಳನ್ನು ರಚಿಸಿದವರು ಕಾದಂಬರಿಗಳ ಪಾತ್ರ ಕಥಾವಸ್ತು ಹಾಗೂ ಸನ್ನಿವೇಶಗಳ ಚಿತ್ರಣ ಇವುಗಳಲ್ಲಿ ತಮ್ಮ ಆಳವಾದ ಅಧ್ಯಯನ ಮತ್ತು ಅನುಭವಗಳ ಗಾಢವಾದ ಪ್ರತಿಭೆಯನ್ನು ಪ್ರದರ್ಶಿಸಿದವರು ಸಾಮಾನ್ಯ ಓದುಗನ ಮನಃಪತನದಲ್ಲಿ ಯಾವತ್ತೂ ಉಳಿಯುವಂತೆ ತಮ್ಮದೇ ಆದ ಕಥಾನಕ ಶೈಲಿಯನ್ನು ಭಾಷಾ ಪ್ರಭುತ್ವವನ್ನು ಅಳವಡಿಸಿಕೊಂಡವರು.

ತಮ್ಮ ಕೃತಿಗಳನ್ನು ಕುರಿತು ವಿಮರ್ಶಕರ ನಿಲುವೇನು ಎಂದು ನಿರೀಕ್ಷಿಸದ ಭೈರಪ್ಪನವರನ್ನು ವಿಮರ್ಶಕರು ಅನೇಕರು ಯಥಾ ಸ್ಥಿತಿ ವಾದಿ ಪ್ರಗತಿ ವಿರೋಧಿ ಎಂಬುದಾಗಿ ತಂತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದಿದೆ. ವಿಮರ್ಶಕರ ಗೆಲುವು ಹೇಗಿದ್ದರೂ ಅದು ಭೈರಪ್ಪನವರ ಅಸಂಖ್ಯಾತ ಓದುಗರ ಮೇಲೆ ಯಾವ ಪರಿಣಾಮವೂ ಬೀರಲಿಲ್ಲ ಬದಲಾಗಿ ವಿಮರ್ಶಕರು ಕೂಡ ಇವರನ್ನು ಜನಪ್ರಿಯ ಲೇಖಕರ ಸಾಲಿಗೆ ಸೇರಿಸಿ ಬಿಡಬೇಕಾಯಿತು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಕಾದಂಬರಿ ಪ್ರಕಾರಕ್ಕೆ ಸಂಬಂಧಿಸಿದಂತೆ ಜನಪ್ರಿಯ ಮತ್ತು ಗಂಭೀರ ಸಾಹಿತಿಕ ಎಂಬೆರಡು ವರ್ಗಗಳು ರೂಪಗೊಂಡು ಈಗಲೂ ಸಮಾನಂತರವಾಗಿ ಸಾಗುತ್ತಿವೆ. ನಾಟಕದಲ್ಲಿ ವೃತ್ತಿ ಹವ್ಯಾಸಿ ಸಿನಿಮಾದಲ್ಲಿ ವಾಣಿಜ್ಯ ಕಲಾತ್ಮಕ ಪ್ರಭೇದ ಕ್ರಮದಲ್ಲಿ ಈ ವರ್ಗೀಕರಣವು ವಿನ್ಯಾಸಗೊಂಡಿರುವುದು. ಈ ರೀತಿಯ ವರ್ಗೀಕರಣ ಕನ್ನಡದಲ್ಲಿ ೧೯೫೦ರ ನಂತರದ ಬೆಳವಣಿಗೆ ಬೇರೆಬೇರೆ ಸಾಹಿತ್ಯದ ಮತ್ತು ಸಾಹಿತ್ಯೇತರ ಕಾರಣಗಳಿಂದ ಈ ಪ್ರಭೇದಗಳು ಪರಸ್ಪರ ವಿರುದ್ಧವೆಂಬ ರೀತಿಯಲ್ಲಿ ಬೆಳೆದು ಬಂದು ಈ ಜನಪ್ರಿಯ ಜನಪರ ಎನ್ನುವ ಪದಗಳು ಇಂದು ಸಾಂದರ್ಭಿಕ ಯಾದೃಚಿಕ ಅರ್ಥ ಕೊಡುವ ಹಂತಕ್ಕೆ ಬಂದಿದೆ. ಅಂದರೆ ಒಬ್ಬ ಕಾದಂಬರಿ ಕಾರನ ಕಾದಂಬರಿಗಳು ಜನಪ್ರಿಯವಾಗತೊಡಗಿದಾಗ ಜನಪ್ರಿಯತೆಯ ಪರಿಕಲ್ಪನೆಯನ್ನು ಪ್ರಧಾನವಾಗಿಟ್ಟುಕೊಂಡು ಅವರ ಕೃತಿಗಳ ವಿಮರ್ಶೆಗೆ ಮುಂದಾಗುತ್ತವೆ. ಇದೇ ರೀತಿ ಭೈರಪ್ಪನವರು ಮತ್ತು ಅವರ ಕೃತಿಗಳು ವಿಮರ್ಶೆಗೆ ಒಳಗಾದವು.

ಭೈರಪ್ಪನವರನ್ನು ಜನಪ್ರಿಯ ಲೇಖಕರೆಂಬ ಕಾರಣದಿಂದ ಆರಂಭಿಕ ಹಂತದಲ್ಲಿ ನಮ್ಮ ವಿಮರ್ಶಾವಲಯದಲ್ಲಿ ಗಂಭೀರವಾಗಿ ಪರಿಗಣಿಸಲಾಗದಿದ್ದರು ಅವರನ್ನು ಕಡೆಗಣಿಸುವುದು ಸಾಧ್ಯವಾಗಲಿಲ್ಲ. ಅವರು ಓದುಗರಿಗೆ ಬೇರೆ ಬೇರೆ ರೀತಿ ಪ್ರಿಯವಾಗುವಂತೆ ಕೃತಿ ರಚನೆ ಮಾಡುತ್ತಾರೆ ಮುಖ್ಯವಾಗಿ ಓದುಗರ ಬುದ್ಧಿಯನಲ್ಲ ಭಾವನೆಗಳನ್ನು ಪ್ರಚೋದಿಸುವ ನಿಟ್ಟಿನಲ್ಲಿ ಅವರು ಬರೆಯುತ್ತಾರೆ. ಅವರ ಕೃತಿಗಳ ವೈಚಾರಿಕತೆ ತೆಳುವಾಗಿರುತ್ತದೆ ಅಥವಾ ಅವರ ವೈಚಾರಿಕತೆ ಮತ್ತು ಸೃಜನಶೀಲತೆಯ ನಡುವೆ ಬಿರುಕಿದೆ. ಇತ್ಯಾದಿಯಾಗಿ ಭೈರಪ್ಪನವರ ಇತಿಮಿತಿಗಳನ್ನು ಗುರುತಿಸುತ್ತಾ ಆ ನೆಲೆಯಲ್ಲಿಯೇ ಅವರ ಜನಪ್ರಿಯತೆ ಗುಟ್ಟಿನಶೋಧವನ್ನು ವಿಮರ್ಶಕರನೇಕರು ನಡೆಸಿದ್ದಾರೆ.

"ಭೈರಪ್ಪನವರ ಕೃತಿ ಇಷ್ಟವಾಗಿದೆ ಎನ್ನುವುದಕ್ಕಿಂತ ಹಲವು ಕೃತಿ ,ಹಲವಾರು ಕಾರಣಕ್ಕೆ ಇಷ್ಟವಾಗುತ್ತಾ ಹೋಗುತ್ತದೆ .ಹಲವಾರು ಪಾತ್ರಗಳು ತತ್ವ ನಿಷ್ಠೆಗಿಂತ, ಸತ್ಯನಿಷ್ಠೆಯಿಂದ ಹತ್ತಿರವಾಗುತ್ತದೆ" ಎನ್ನುತ್ತಾರೆ ರೇಖಾಕಾಖಂಡಿಕೆಯವರು. ಭೈರಪ್ಪನವರ ಇಂತಹ ಅಗಾಧವಾದ ಜನಪ್ರಿಯತೆಗೆ ಕಾರಣಗಳೇನು ಎಂಬುದಕ್ಕೆ ಸಿಎನ್ ರಾಮಚಂದ್ರನ್ ಅವರು ಈ ರೀತಿಯಾಗಿ ಅಭಿಪ್ರಾಯ ಪಡುತ್ತಾರೆ. "ಭೈರಪ್ಪನವರು ಸಂಪ್ರದಾಯವಾದಿಗಳು ಇವರದು ರಂಜಿಸಿ ವಂಚಿಸುವ ಕಲೆ "ಎಂದು ಸುಲಭ ತೀರ್ಮಾನಗಳನ್ನು ಕೊಟ್ಟು ಅವರನ್ನು ಸಾರಾಸಗಟ್ಟಾಗಿ ತಿರಸ್ಕರಿಸಿದರೆ ವಿಮರ್ಶೆ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ. ನನ್ನ ದೃಷ್ಟಿಯಲ್ಲಿ ಭೈರಪ್ಪನವರ ಕಾದಂಬರಿಗಳು ವಿಮರ್ಶೆಗೆ ಒಂದು ಸವಾಲು ,ಅವರ ಕಾದಂಬರಿಗಳ ಹಾಗೂ ಅವುಗಳ ಜನಪ್ರಿಯತೆಯ ಗಂಭೀರ ವಿಶ್ಲೇಷಣೆ ಪ್ರಾಯಶಃ ಸ್ವಾತಂತ್ರ್ಯೋತ್ತರ ಭಾರತೀಯ ಸಮಾಜ ಸಂಸ್ಕೃತಿಗಳ ಬಗ್ಗೆ ಅನೇಕ ಪ್ರಮುಖ ಒಳನೋಟಗಳನ್ನು ನೀಡುವುದು."

"ವಾಚಕ ವರ್ಗದಲ್ಲಿ ತುಂಬಾ ಜನಪ್ರಿಯ ವಾಗುವ ಒಂದು ಕೃತಿ ವಿದ್ವಜನರಿಗೂ ವಿಮರ್ಶಕರಿಗೂ ಮೆಚ್ಚುಗೆ ಆಗಲಿಕೆ ಬೇಕು. ತನ್ನ ವಿಶಿಷ್ಟ ಗುಣ ಮೌಲ್ಯಗಳಿಂದ, ಕಾವ್ಯ ಲಕ್ಷಣಗಳಿಂದ, ಹೀಗೆ ಉಭಯ ಮಾನ್ಯವಾದ ಕೃತಿಕಾರರು ನಿಜವಾಗಿಯೂ ಧನ್ಯರು. ಈ ಧನ್ಯ ಕೋಟಿಗೆ ಸೇರಿದವರು ಭೈರಪ್ಪನವರು" ಎಂದು ತಮ್ಮ ಲೇಖನವೊಂದರಲ್ಲಿ ಸಮರ್ಥವಾಗಿ ಹೇಳಿರುವ ಗೌರೀಶ ಕಾಯ್ಕಿಣಿ ಅವರಿಗೆ ಭೈರಪ್ಪನವರದು ಒಂದು ವ್ಯಕ್ತಿ ಅಲ್ಲ .ಒಂದು ದ್ವಂದ್ವ ವ್ಯಕ್ತಿತ್ವವಾಗಿ ಕಾಣಿಸಿದೆ. ಮಾತ್ರವಲ್ಲ ಅವರು ಮಾನವ ಜೀವನದ ರಸ ಚಿಂತನಗಳನ್ನು ಮತ್ತು ಉತ್ಕಟ ಸುಖ-ದುಃಖದ ಶಕ್ತಿ ದೌರ್ಬಲ್ಯಗಳ ಕಟುಮಧುರ, ರುದ್ರ ರಮ್ಯ ಪ್ರಸಂಗಗಳನ್ನಷ್ಟೇ ಚಿತ್ರಿಸಿ ಎಸೆಯುವುದಿಲ್ಲ. ಈ ಜೀವನದ ಮೂಲಗಳ ಮೌಲ್ಯಗಳ ಶೋಧನೆಗೂ ಅಷ್ಟೇ ಆಸಕ್ತಿಯಿಂದ ತೊಡಗುತ್ತಾರೆ. ಎನ್ನುವ ಗೌರಿ ಕಾಯ್ಕಿಣಿ ಯವರು 'ಧರ್ಮಶ್ರೀ' 'ದಾಟು' 'ಗ್ರಹಣ' 'ನಿರಾಕರಣ' 'ಗೃಹ ಭಂಗ' ಮೊದಲಾದ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಮಾನವ ನೀತಿ- ಧರ್ಮ ದ ಈ ಹಿನ್ನಲೆಯಲ್ಲಿ ರೂಪಿತಗೊಂಡಿರುವ ಧರ್ಮದ ಪ್ರಜ್ಞೆಯನ್ನು ವಿಶ್ಲೇಷಿಸುತ್ತಾ --"ಒಂದೊಂದು

ಕಾದಂಬರಿಯಲ್ಲಿಯೂ ಭೈರಪ್ಪನವರು ಹಿಂದೂ ಧರ್ಮದ ಒಂದೊಂದು ಪ್ರಮೇಯದಲ್ಲಿ ವ್ಯಗ್ರರಾಗಿದ್ದಾರೆ. ಸ್ವಧರ್ಮ, ಕುಲ ಧರ್ಮ, ಜಾತಿ ಧರ್ಮ, ಸಮಾಜ ಧರ್ಮ, ಸಂಸ್ಕೃತಿ ರೂಪವಾದ ರಾಷ್ಟ್ರ ಧರ್ಮ ಇವೆಲ್ಲ ಮುಖಗಳು ಒಂದೊಂದು ಕೋನದಿಂದ ಒಂದೊಂದು ಕಾದಂಬರಿಯಲ್ಲಿ ಕನ್ನಡಿ ಹಿಡಿದಂತಿದೆ. ಕಲಾವಿದ ಭೈರಪ್ಪನವರು ವ್ಯಕ್ತಿ ವ್ಯಕ್ತಿಯ ಮಾನವೀಯತೆಯ ವಿಶಿಷ್ಟ ಉದ್ದೇಶವನ್ನು ಈ ಮೂಲಕ ಜೀವನ ಚಾರಿತ್ರದ ವಿಕಾಸವನ್ನು ಅದರ ಎಲ್ಲಾ ಏರುಪೇರುಗಳೊಂದಿಗೆ ಚಿತ್ರಿಸುತ್ತಿರುವಾಗಲೇ, ದಾರ್ಶನಿಕ ಭೈರಪ್ಪನವರು ಈ ವರ್ಣ ರಂಜಿತ ಚಿತ್ರಕ್ಕೆ ಅಚ್ಚು ಕಟ್ಟಾದ ಅಷ್ಟೇ ಗಟ್ಟಿ ಮುಟ್ಟಾದ ಧರ್ಮವಿಜ್ಞಾಸೆ ,ಧರ್ಮ ಮೀಮಾಂಸೆಗಳ ಗಣನೀಯವಾದ ಚೌಕಟ್ಟನ್ನು ಜೋಡಿಸುತ್ತಾರೆ. ಈ ಚೌಕಟ್ಟು ಆ ಚಿತ್ರದಷ್ಟೇ ರೋಚಕವಾಗಿದೆ". ಎಂದಿರುವ ಅವರ ಮಾತುಗಳು ಎಸ್. ಎಲ್. ಭೈರಪ್ಪನವರ ಕೃತಿಗಳನ್ನು ಅರ್ಥೈಸಲು ಸಹಾಯಕವಾದ ಮಾರ್ಗದರ್ಶಕ ಸೂಚಿಗಳಾಗಿವೆ.

ಭೈರಪ್ಪನವರ ಕಥಾವಸ್ತು ಅದನ್ನು ಹೇಳುವ ಶೈಲಿಯು ಕೌಶಲ್ಯದಿಂದ ಕೂಡಿದೆ. ಒಂದರಲ್ಲಿ ಧರ್ಮಾಂತರದ ಪ್ರಶ್ನೆ ಮತ್ತೊಂದರಲ್ಲಿ ಜಾತಿಭೇದ ಇವನ್ನೆಲ್ಲಾ ನಿರೂಪಿಸಲು ಯೋಜಿಸಿದಾಗ ಅಲ್ಲಿಯ ಪಾತ್ರಗಳ ಆಂತರ್ಯದಿಂದಲೇ ಅಲ್ಲಿಯ ಬದುಕನ್ನು ನೋಡಿ ಬಣ್ಣಿಸುವುದು ಕಾದಂಬರಿ ಕಾರನ ಕರ್ತವ್ಯವೂ ಕೌಶಲ್ಯವೂ ಆಗಿದೆ ಎನ್ನುವ ನಿವೇದಿತಾ ಅಡ್ನಂಗಡಿಯವರು "ಪ್ರತಿಯೊಬ್ಬ ಕಾದಂಬರಿ ಕಾರನಿಗೂ ಪ್ರಪಂಚದ ನೂರಾರು ಸಮಸ್ಯೆಗಳು ಕಣ್ಣ ಮುಂದೆ ಸುಳಿದರೂ ಭೈರಪ್ಪನವರು ಧಾರ್ಮಿಕ ಪ್ರಪಂಚಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಆಯ್ದು ಪ್ರತಿಯೊಂದು ಕಾದಂಬರಿಗಳಲ್ಲಿ ಬರೆಯುತ್ತಾ ನೇರವಾಗಿ ಧರ್ಮಶಾಸ್ತ್ರದ ಬಗ್ಗೆ ಹೇಳಿ ಬೋರು ಹೊಡಿಸದೆ, ಅದನ್ನು ವಸ್ತು ವಿನ್ಯಾಸದೊಂದಿಗೆ ವ್ಯಕ್ತಿಗಳ ವ್ಯಕ್ತಿತ್ವದ ಹೃದಯಸ್ಪರ್ಶಿಯಾದ ಘಟನೆಗಳ ಚಿತ್ರಣವನ್ನು ತಮ್ಮದೇ ವಿಶೇಷ ಶೈಲಿಯೊಂದಿಗೆ ಹಿಂದೂ ಧರ್ಮದ ಕೆಲವೊಂದು ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುವುದರಲ್ಲಿ ಭೈರಪ್ಪನವರ ಕೌಶಲ್ಯ ಮೆಚ್ಚುವಂತದ್ದಾಗಿದೆ "ಎಂಬ ಅಭಿಪ್ರಾಯವನ್ನು ನೀಡುತ್ತಾರೆ.

ಕೆ ಎಸ್ ವತ್ಸಲ ವಿಶ್ವನಾಥ್ ಅವರು ಭೈರಪ್ಪನವರನ್ನು ಕುರಿತಂತೆ ಈ ರೀತಿಯಾಗಿ ಅಭಿಪ್ರಾಯ ಪಡುತ್ತಾರೆ. "ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಅಭೂತಪೂರ್ವ ಕೃತಿಗಳನ್ನು ಕೊಡುಗೆಯಾಗಿ ನೀಡಿರುವ ಖ್ಯಾತ ಸಾಹಿತಿ ಡಾ. ಎಸ್ ಎಲ್ ಭೈರಪ್ಪನವರು ಭಾರತೀಯ ಸಾಹಿತ್ಯ ಕ್ಷೇತ್ರ ಕೂಡ ಸ್ವೀಕರಿಸುವ ಶ್ರೇಷ್ಠ ಕಾದಂಬರಿ ಕಾರರು. ಏಕೆಂದರೆ ಅವರ ಬಹುತೇಕ ಕೃತಿಗಳು ಗಳು ಕನ್ನಡದಿಂದ ಭಾರತದ ಇತರ ಭಾಷೆಗಳಿಗೆ ಅತ್ಯಂತ ಸಮರ್ಥವಾಗಿ, ಸಶಕ್ತವಾಗಿ ಅನುವಾದಗೊಂಡು ಭಾರತೀಯ ವಿದ್ವಾಂಸರ ಸಾಹಿತ್ಯ ಹೃದಯವನ್ನು ಗೆದ್ದುಕೊಂಡಿವೆ. ಅಪಾರ ಜನಮನ್ನಣೆ ಯನ್ನು ಜನಪ್ರಿಯತೆಯನ್ನು ಗಳಿಸಿಕೊಂಡಿರುವ ,ಭಾರತೀಯ ಸಂಸ್ಕೃತಿ, ತತ್ವಜ್ಞಾನ ,ಕಲೆ ,ಆಧ್ಯಾತ್ಮಿಕ ,ರಾಜಕೀಯ, ಐತಿಹಾಸಿಕ ವಿಚಾರಧಾರೆಯನ್ನು ತಲಸ್ಪರ್ಶಿಯಾಗಿ ಅಧ್ಯಯನ ನಡೆಸಿ ಅವುಗಳ ಸತ್ವವನ್ನು ತಮ್ಮದೇ ಆದ ವಿಶಿಷ್ಟ ವಿನ್ಯಾಸ ,ವೈವಿಧ್ಯತೆಗಳಲ್ಲಿ ಹಿಡಿದಿಟ್ಟು ಕಲಾಕೃತಿಗಳಿಗೆ ಜೀವಂತ ಸ್ವರೂಪವನ್ನು ಕೊಡುವಲ್ಲಿ ಸಿದ್ಧ ಹಸ್ತರು ಎಂದರೆ ಉತ್ಪ್ರೇಕ್ಷೆಯೆನಿಸದು."

ಡಾ. ಎಸ್.ವಿ ಪ್ರಭಾವತಿ ಯವರು "ಭೈರಪ್ಪನವರ ಕಾದಂಬರಿಗಳನ್ನು ಬದುಕಿಗೆ ಬದುಕು ಬರೆದ ಭಾಷ್ಯ. ಇವರ ಬರವಣಿಗೆಯಲ್ಲಿ ಇದನ್ನು ಬಿಟ್ಟು ಎಲ್ಲವನ್ನು ಹುಡುಕುವುದೆಂದರೆ ಮರಗಳನ್ನು ಎಣಿಸುತ್ತಾ ಕಾಡಿನ ಒಟ್ಟು ನೋಟವನ್ನು ಕಳೆದುಕೊಳ್ಳುವುದು ಎಂದೆಂಬ ಅಭಿಪ್ರಾಯವನ್ನು ಪಡುತ್ತಾರೆ."

ರಾಮಾಯಣ ಮಹಾಭಾರತಗಳು ಇಡೀ ದೇಶವನ್ನು ಆಕ್ರಮಿಸಿ ಹಿಡಿದಿಡುವಂತೆ ಅನಕ್ಷರಸ್ಥ ಅವಿದ್ಯಾವಂತರನ್ನು ತಲುಪುವಂತೆ ಇವರ ಬರವಣಿಗೆಗಳು ಅಕ್ಷರ ಬಲ್ಲವರು ಭಾಷೆ ಬಲ್ಲವರು ವೈಚಾರಿಕತೆ ಇರುವವರು ಓದುವ ಹವ್ಯಾಸವುಳ್ಳವರು ಸಾಹಿತ್ಯದಲ್ಲಿ ಆಸಕ್ತಿ ಇರುವವರನ್ನು ಆಕ್ರಮಿಸಿ ಹಿಡಿದಿಡುತ್ತದೆ.

ಭೈರಪ್ಪನವರ ಕಾದಂಬರಿ ಪ್ರಪಂಚದ ವೈವಿಧ್ಯ ಹಾಗೂ ವಿಸ್ತಾರಗಳು ಈ ಪ್ರಪಂಚ ಹಾಗೂ ಇಲ್ಲಿನ ಪಾತ್ರಗಳು ಅತ್ಯಂತ ಸಂಕೀರ್ಣ ರಚನಾ ವಿನ್ಯಾಸಗಳುಳ್ಳವು.ಮಾನವನ ಪ್ರಜ್ಞಾ ವಿಕಾಸ ಪಥದಲ್ಲಿ ಕಂಡುಬರುವ ಅನ್ನಮಯದಿಂದ ಆನಂದಮಯದವರೆಗಿನ ವಿಭಿನ್ನ ಹಂತಗಳ ಪ್ರಜ್ಞಾಸ್ತರಗಳು ಈ ಕಾದಂಬರಿ ಪ್ರಪಂಚದ ಪಾತ್ರಗಳಲ್ಲಿ ಮೂರ್ತಗೊಳ್ಳುತ್ತಾ ಸ್ಪಷ್ಟ ರೂಪ ತಡೆದು ಕಲಾತ್ಮಕವಾಗಿ ಅನಾವರಣಗೊಳ್ಳುತ್ತವೆ.

ಭೈರಪ್ಪನವರನ್ನು ಅರ್ಥೈಸುವ ಪ್ರಯತ್ನದಲ್ಲಿ ನಮಗೆ ಪ್ರಮುಖವಾಗಿ ಕಾಣಿಸುವುದು ಅವರ ಆತ್ಮನಿಷ್ಠೆ ಅನುಭವ ನಿಷ್ಠೆ ಮತ್ತು ವ್ಯಾಪಕ ಅಧ್ಯಯನಗಳು. ಮಾನವ ಅನುಭವವನ್ನು ಶೋಧಿಸುವುದು ಮತ್ತು ಚಿತ್ರಿಸುವುದೇ ತಮ್ಮ ಬರವಣಿಗೆಯ ಪ್ರಮುಖ ಲಕ್ಷಣವೆಂಬುದನ್ನು ಅವರೇ ಹೇಳಿಕೊಂಡಿರುತ್ತಾರೆ . ಹೀಗೆ ಲೇಖಕರಿಗೆ ಸಾಧ್ಯವಾಗಿದೆ ಯಾವುದೋ ಒಂದು ವಿಶಿಷ್ಟ ಗುಣವನ್ನು ರೂಡಿಸಿಕೊಂಡವರು .ಅಲ್ಲದೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾಣಿಸಿಕೊಂಡ ಯಾವುದೇ ಚಳುವಳಿಗಳಿಗೆ ಯಾವುದೇ ರೀತಿಯಲ್ಲಿ ಬದ್ಧರಾಗದೇ ತಮ್ಮದೇ ಆದ ವಿಚಾರ ದರ್ಶನ, ಕಾಣಿಕೆಗಳೊಂದಿಗೆ ಒಂದು ವಿಶಿಷ್ಟ ಸಾಹಿತ್ಯ ಪ್ರಚರ ಪ್ರಕಾರಕ್ಕೆ ಬದ್ಧರಾಗಿ ನಿರಂತರ ಸೃಜನಶೀಲ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡ ಭೈರಪ್ಪನವರು ಜನಸಾಮಾನ್ಯರ ದೃಷ್ಟಿಯಲ್ಲಿ ಬಹುಜನಪ್ರಿಯ ಕಾದಂಬರಿಕಾರರಾಗಿ ಗುರುತಿಸಿಕೊಂಡವರು

ಗ್ರಂಥಋಣ.

1.'ಚಿತ್ತಭಿತ್ತಿ' . ಪ್ರಭಾವತಿ ಎಸ್. ಆರ್.
ಸಾಹಿತ್ಯ ಭಂಡಾರ
ಬೆಂಗಳೂರು ೨೦೦೬.
2. 'ಎಸ್.ಎಲ್.ಭೈರಪ್ಪ '
ಪ್ರಧಾನ ಗುರುದತ್ತ ದೇಶಕುಲಕರ್ಣಿ (ಸಂ)
ನವಕರ್ನಾಟಕ ಪಬ್ಲಿಕೇಶನ್ ಪ್ರೈವೇಟ್ ಲಿಮಿಟೆಡ್ ೨೦೦೯.
3. 'ಭೈರಪ್ಪನವರ ಕಾದಂಬರಿ ಗಳು'
ಲೀಲಾವತಿ ತೋರಣಗಟ್ಟಿ.
ಸಿರಿಗನ್ನಡಂ ಪ್ರಕಾಶನ, ಧಾರವಾಡ ೧೯೭೭.
4. 'ಸಾಮಾನ್ಯಜ್ಞಾನ ಭೈರಪ್ಪ ಅಭಿನಂದನಾ ಸಂಚಿಕೆ'

ವೆಂಕಟೇಶ್ ಜಿ.ಕೊಂಡಜ್ಜಿ.
ಕೊಂಡಜ್ಜಿ ಪ್ರಕಾಶನ
ಬೆಂಗಳೂರು ೧೯೯೩.